# ಬೆಕ್ಕಿಗೆ ಹೆದರಿದ ಮಂಗ



ಚಿತ್ರಗಳು: ಗಣೇಶ್ ಅರಳಿಕಟ್ಟೆ

ಒಂದು ದಿನ ಅಡವಿಯನ್ನೆಲ್ಲ ಹುಡುಕಿದರೂ ಬೆಕ್ಕಿಗೆ ತಿನ್ನಲು ಆಹಾರ ಏನೂ ಸಿಗಲಿಲ್ಲ. ಬೆಕ್ಕು ದಣಿದು ಬಂದು ಮರದ ಬುಡದಲ್ಲಿ ಕುಳಿತುಕೊಂಡಿತು. ಆದರೆ ನೊಣಗಳು ಅದನ್ನು ಆರಾಮವಾಗಿರಲು ಬಿಡಲಿಲ್ಲ. ಸಮೀಪದಲ್ಲಿ ಒಂದು ಮಂಗ ಹೋಗುತ್ತಿರುವುದನ್ನು ಕಂಡ ಬೆಕ್ಕು 'ಮಂಗಣ್ಣ ನನಗೆ ತುಂಬಾ ಆಯಾಸವಾಗಿದೆ. ಸ್ವಲ್ಪ ಈ ನೊಣಗಳನ್ನು ಓಡಿಸು' ಎಂದಿತು. ಬೆಕ್ಕಿನ ಮಾತನ್ನು ಕೇಳಿದ ಮಂಗ ನೊಣಗಳನ್ನು ಓಡಿಸಿತು.  ಬೆಕ್ಕು ಮಲಗಿರುವುದನ್ನು ನೋಡಿದ ಮಂಗ ಬೆಕ್ಕಿನ ಬಾಲವನ್ನು ಮರಕ್ಕೆ ಕಟ್ಟಿ ಹಾಕಿತು.

ಬೆಕ್ಕು ನಿದ್ರೆಯಿಂದ ಎಚ್ಚರಗೊಂಡು ನೋಡಿದರೆ ಅದರ ಬಾಲ ಮರಕ್ಕೆ ಕಟ್ಟಲ್ಪಟ್ಟಿತ್ತು. ಎಷ್ಟು ಪ್ರಯತ್ನಿಸಿದರೂ ಅದಕ್ಕೆ ಬಾಲ ಬಿಡಿಸಿಕೊಳ್ಳಲು ಆಗಲಿಲ್ಲ. ಅಲ್ಲೇ ಸ್ವಲ್ಪ ದೂರದಲ್ಲಿ ಹಾದು ಹೋಗುತ್ತಿದ್ದ ಇಲಿ ಕಣ್ಣಿಗೆ ಬಿತ್ತು. 'ಇಲಿಯಣ್ಣ, ನನ್ನ ಬಾಲ ಬಿಡಿಸು. ನಿನ್ನ ಉಪಕಾರ ನಾನು ಮರೆಯುವುದಿಲ್ಲ. ನಿನ್ನನ್ನು ತಿನ್ನುವುದಿಲ್ಲ' ಎಂದು ವಚನ ನೀಡಿತು.

ಇಲಿ ಬೆಕ್ಕಿನ ಮಾತನ್ನು ನಂಬಿ ಬಾಲವನ್ನು ಬಿಡಿಸಿತು. ಬೆಕ್ಕು ಇಲಿಗೆ 'ಅಡವಿ ಬೆಕ್ಕು ಸತ್ತಿದೆ ಎಂದು ಡಂಗುರ ಬಾರಿಸು' ಎಂದಿತು.

ಇಲಿ ಬೆಕ್ಕು ಹೇಳಿದಂತೆ ಮಾಡಿತು. ಬೆಕ್ಕು ಸತ್ತಿರುವಂತೆ ಬಿದ್ದಿತ್ತು. ಅಡವಿಯ ಎಲ್ಲಾ ಪ್ರಾಣಿಗಳು ಬಂದು ಸೇರಿದವು. ಬೆಕ್ಕಿನ ಬಾಲ ಕಟ್ಟಿ ಹಾಕಿದ್ದ ಮಂಗನೂ ಬಂದಿತ್ತು. ಮಂಗನನ್ನು ಕಂಡ ಬೆಕ್ಕು ಅದರ ಮೇಲೆ ಆಕ್ರಮಣ ಮಾಡಿತು. ಆದರೆ ಮಂಗ ಬೆಕ್ಕಿನ ಕೈಗೆ ಸಿಗದೆ ಮರದ ಮೇಲೆ ನೆಗೆಯಿತು. ಮರದಿಂದ ಮರಕ್ಕೆ ಹಾರಿ ಮಾಯವಾಯಿತು. ಅಂದಿನಿಂದ ಬೆಕ್ಕಿಗೆ ಅಂಜಿ ಮಂಗ ನೆಲದ ಮೇಲೆ ಬರಲು ಹೆದರಿತು.

**(ಸಂಗ್ರಹ) ಕೆ.ಆರ್. ಗೀತಾಂಜಲಿ, ಕೊಟ್ಟೂರು**



# ನಮ್ಮ ಊರು

ನೋಡ ಬನ್ನಿ ಗೆಳೆಯರೆ
ನಮ್ಮ ಊರಿನಂದವ
ಪದಗಳಿಲ್ಲ ಬಣ್ಣಿಸಲು
ಹಸಿರು ಸಿರಿಯ ಚಂದವ

ಸುತ್ತ ಮುತ್ತ ಬೆಟ್ಟ-ಗುಡ್ಡ
ತಪ್ಪಲಲ್ಲಿ ನದಿಯಿದೆ
ಭೀಕರ ಬರಗಾಲದಲ್ಲೂ
ಬತ್ತದಷ್ಟು ಜಲವಿದೆ

ತೆಂಗು-ಕಂಗು, ಬಾಳೆ, ಭತ್ತ
ಮಡಿಲು ತುಂಬಿ ನಿಂತಿವೆ
ಕಣ್ಣು ಕೋರೈಸುವಂತೆ
ಇಳೆಗೆ ಕಳೆಯ ಕಟ್ಟಿವೆ

ರಂಗು ರಂಗಿನ ಹೂಗಳು
ಮನಕೆ ಮುದವ ನೀಡಿವೆ
ಗುಂಯ್‌ಗುಡುವ
ಜೇನ್ನೊಣಗಳು
ಇಲ್ಲಿ ಮನೆಯ ಮಾಡಿವೆ

ಅಸಾಧ್ಯವು ಬಣ್ಣಿಸಲು
ಊರ ಜನರ ಪರಿಶ್ರಮ
ಕಂಗಳನ್ನು ತಣಿಸುವಂಥ
ಊರ ಚೆಲುವು ಅನುಪಮ!

**-ಗೀತಾ ಬರ್ಲ,**
**ಅಮ್ಮೆ**